ಓ ಎಸ್ ನಂಃ 325-2014

ಡಿ. ಡಬ್ಲ್ಯೂ ಃ 1

ದಿಃ 20.11.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು ಃ ವಾದಿ ಪರ ಶ್ರೀ ಆರ್.ಸಿ.ಕೆ ವಕೀಲರಿಂದ

14. ನನ್ನ ತಂದೆ ರಾಮೇಗೌಡರ ತಂದೆಯ ಹೆಸರು ನರಸಿಂಹೇಗೌಡ ಮತ್ತು ತಾಯಿಯ ಹೆಸರು ಲಕ್ಷ್ಮೀನರಸಮ್ಮ. ಸದರಿ ನರಸಿಂಹೇಗೌಡರ ತಂದೆಯ ಹೆಸರು ನರಸಿಂಹಯ್ಯ. ಸದರಿ ನರಸಿಂಹಯ್ಯ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸದರಿ ನರಸಿಂಹಗೌಡರಿಗೆ ನಾಗಮ್ಮ ಅಲಿಯಾಸ್ ನಿಂಗಮ್ಮ ಹಾಗೂ ಲಕ್ಷ್ಮೀನರಸಮ್ಮ ಎಂದರೆ ಸರಿ. ನಾನು ನನ್ನ ತಾತ ನರಸಿಂಹೇಗೌಡರನ್ನು ನೋಡಿಲ್ಲ. ಅವರು ಯಾವ ಕಾರಣಕ್ಕೆ ಇಬ್ಬರು ಹೆಂಡತಿಯರನ್ನು ಮದುವೆಯಾದರು ಎಂದು ಗೊತ್ತಿಲ್ಲ. ನಾನು ಹಿರಿಯರಲ್ಲಿ ಆ ಬಗ್ಗೆ ಕೇಳಿ ತಿಳಿದುಕೊಂಡಿಲ್ಲ. ಲಕ್ಷ್ಮೀನರಸಮ್ಮ ರವರನ್ನು ಮದುವೆಯಾಗುವಾಗ ಮೊದಲನೆ ಹೆಂಡತಿ ನಾಗಮ್ಮ ಮೃತಪಟ್ಟಿದ್ದರು. ನಾಗಮ್ಮ ರಿಗೆ ಇಬ್ಬರು ಮಕ್ಕಳು ಅವರುಗಳೆಂದರೆ ನರಸಪ್ಪ ಹಾಗೂ ಸಂಜೀವೇಗೌಡ. ಸಂಜೀವೇಗೌಡ ರನ್ನು ಸಂಜೀವಯ್ಯ ಎಂಬುದಾಗಿ ಕೂಡ ಕರೆಯುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

15. ನನಗೆ ಕನ್ನಡ ಇಂಗ್ಲೀಷ್ ಓದಲು ಬರುವುದಿಲ್ಲ. ನನಗೆ ದಾಖಲೆಗಳನ್ನು ಓದಲು ಬರುವುದಿಲ್ಲ. ಸದರಿ ನರಸಪ್ಪ ನಿಗೆ ಇಬ್ಬರು ಹೆಂಡತಿಯರು ಅವರುಗಳೆಂದರೆ ಅಂಕಮ್ಮ ಹಾಗೂ ರಂಗಮ್ಮ ಎಂದರೆ ಸರಿ. ಸದರಿ ಅಂಕಮ್ಮ ನ ಮೂಲಕ ಅಂಕಮ್ಮ ಎಂಬ ಮಗಳು ಎಂದರೆ ಸಾಕ್ಷಿ ಅಕ್ಕಮ್ಮ ಎಂಬ ಮಗಳು ಎಂದು ನುಡಿಯುತ್ತಾರೆ. ರಂಗಮ್ಮ ರವರ ಮೂಲಕ ಅವರಿಗೆ ಮಕ್ಕಳಿರುವುದಿಲ್ಲ. ಸಂಜೀವೇಗೌಡ ರ ಹೆಂಡತಿ ಹೆಸರು ಈರಮ್ಮ. ಈರಮ್ಮ ರವರ ತಂದೆಯ ಹೆಸರು ನಾಗಣ್ಣ ಎಂದರೆ ಸರಿ. ನಾಗಣ್ಣ ರವರ ತಂದೆಯ ಹೆಸರು ಕೆಂಚಯ್ಯ ಎಂದರೆ ಸರಿ.

16. ಲಕ್ಷ್ಮೀನರಸಮ್ಮ ಮೂಲಕ 3 ಜನ ಮಕ್ಕಳು. ಅವರುಗಳೆಂದರೆ ಚಿಕ್ಕನರಸೇಗೌಡ, ರಾಮೇಗೌಡ ಹಾಗೂ ಲಕ್ಷ್ಮಣ. ಚಿಕ್ಕನರಸೇಗೌಡರು ಮೃತಪಟ್ಟಿದ್ದು, ಅವರಿಗೆ ದೊಡ್ಡ ರಂಗಮ್ಮ ಹಾಗೂ ವೆಂಕಟಲಕ್ಷ್ಮಮ್ಮ ಎಂಬ ಇಬ್ಬರು ಹೆಂಡತಿಯರು. ದೊಡ್ಡ ರಂಗಮ್ಮ ರು

ಮೃತಪಟ್ಟಿದ್ದು, ಅವರಿಗೆ ಲಕ್ಷ್ಮೀಪತಯ್ಯ ಎಂಬ ಒಬ್ಬರೆ ಮಗ. ವೆಂಕಟಲಕ್ಷ್ಮಮ್ಮ ರವರು ಮೃತಪಟ್ಟಿದ್ದು, ಅವರಿಗೆ ನರಸಿಂಹೇಗೌಡ ಮತ್ತು ನಾಗರಾಜು ಎಂಬ ಇಬ್ಬರು ಮಕ್ಕಳು. ನನ್ನ ತಾಯಿ ಹನುಮಕ್ಕ. ನಾವು ಒಟ್ಟಿಗೆ 4 ಜನ ಮಕ್ಕಳು. ಪುಟ್ಟೇಗೌಡ, ನರಸಿಂಹೇಗೌಡ, ನರಸಿಂಹಯ್ಯ ಹಾಗೂ ನಾನು. ಪುಟ್ಟೇಗೌಡರು ಮೃತಪಟ್ಟಿದ್ದು, ಅವರ ಹೆಂಡತಿ ಚಿಕ್ಕಹನುಮಕ್ಕ, ಅವರ ಮಗ ರಾಜು ಎಂದರೆ ಸರಿ. ನರಸಿಂಹೇಗೌಡರು ಹಾಗೂ ಅವರ ಹೆಂಡತಿ ಸಾಕಮ್ಮ ಮೃತಪಟ್ಟಿದ್ದು, ಅವರಿಗೆ ಮಕ್ಕಳಿಲ್ಲ ಎಂದರೆ ಸರಿ.

**17.** ಸದರಿ ಲಕ್ಷ್ಮಣೇಗೌಡರ ಹೆಂಡತಿ ಮಲ್ಲಮ್ಮ. ಅವರಿಗೆ 5 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು. ಅವರುಗಳೆಂದರೆ ಕೃಷ್ಣಮೂರ್ತಿ, ನರಸೇಗೌಡ, ನರಸಪ್ಪ, ನಾಗರಾಜು, ಸಿದ್ದರಾಜು, ಲಲಿತಮ್ಮ, ಪ್ರಮೀಳಾ ಹಾಗೂ ಅನುಸೂಯ. 1ನೇ ಪ್ರತಿವಾದಿಗೆ ಇಬ್ಬರು ಹೆಂಡತಿಯರು. ಮೊದಲನೆ ಹೆಂಡತಿ ಜಯಮ್ಮ ಹಾಗೂ 2ನೇ ಹೆಂಡತಿ ರತ್ನಮ್ಮ ಎಂದರೆ ಸರಿ. ಜಯಮ್ಮ ರಿಗೆ ಮಂಜುಳಾ ಹಾಗೂ ಶಿಲ್ಪ ಎಂಬ ಇಬ್ಬರು ಮಕ್ಕಳು ಎಂದರೆ ಸರಿ. ರತ್ನಮ್ಮ ರಿಗೆ ನವೀನ್ ಕುಮಾರ್ ಮತ್ತು ಕಾರ್ತೀಕ್ ಎಂಬ ಇಬ್ಬರು ಮಕ್ಕಳು ಎಂದರೆ ಸರಿ.

**18.** ಸಂಜೀವೇಗೌಡ ಹಾಗೂ ಈರಮ್ಮ ನ ಮಕ್ಕಳು ನರಸಿಂಹಯ್ಯ, ಉಗ್ರಪ್ಪ, ಭಾಗ್ಯಮ್ಮ ಹಾಗೂ ನಾಗಮ್ಮ ಎಂದರೆ ಸರಿ. ವಾದಿ ನರಸಿಂಹಯ್ಯ ನ ಹೆಂಡತಿ ಎಂದರೆ ಸರಿ. ದಾವಾ ಸ್ವತ್ತುಗಳು ಮೂಲತಃ ಈರಮ್ಮ ನ ತಂದೆ ನಾಗಣ್ಣನಿಗೆ ಸೇರಿದ್ದು ಎಂದರೆ ಸಾಕ್ಷಿ ನನ್ನ ತಾತ ನರಸಿಂಹೇಗೌಡರ ಆಸ್ತಿ ಎಂದು ನುಡಿಯುತ್ತಾರೆ. ನನ್ನ ತಾತನಿಗೆ ಒಟ್ಟು 63 ಎಕರೆ ಸೋಲೂರು ಗ್ರಾಮದಲ್ಲಿತ್ತು. ಅದರ ಸರ್ವೇ ನಂಬರ್ ಗಳು 89, 90,91,95,96,104,102,107,125/1,131/4, ಗಳು. ಸರ್ವೇ ನಂಬರ್ 4/2 ಕಲ್ಯಾಣ ಪುರ ಗ್ರಾಮದ ಅವರ ಹೆಸರಿನಲ್ಲಿದ್ದ ಸ್ವತ್ತು. ಸರ್ವೇ ನಂಬರ್ 89 ರಲ್ಲಿ 1 ಎಕರೆ 16 ಗುಂಟೆ, 90 ರಲ್ಲಿ 36 ಗುಂಟೆ, 91 ರಲ್ಲಿ 3 ಎಕರೆ 17 ಗುಂಟೆ, 95 ರಲ್ಲಿ 2 ಎಕರೆ 13 ಗುಂಟೆ, 96 ರಲ್ಲಿ 2 ಎಕರೆ 13 ಗುಂಟೆ, 104 ರಲ್ಲಿ 1 ಎಕರೆ 38 ಗುಂಟೆ, 102 ರಲ್ಲಿ 7 ಎಕರೆ 35 ಗುಂಟೆ, 107 ರಲ್ಲಿ 10 ಎಕರೆ 18 ಗುಂಟೆ, 125/1 ರಲ್ಲಿ 3 ಎಕರೆ 12 ಗುಂಟೆ ಹಾಗೂ 131/4 ರಲ್ಲಿ 8 ಎಕರೆ 15 ಗುಂಟೆ ಇದ್ದು ಈಗ 4 ಎಕರೆ 23 ಗುಂಟೆ ಇರುತ್ತದೆ. ಸರ್ವೇ ನಂಬರ್ 4/2 ರಲ್ಲಿ 11 ಎಕರೆ 26 ಗುಂಟೆ ಇರುತ್ತದೆ. ಆ ಸ್ವತ್ತುಗಳು ನರಸಿಂಹೇಗೌಡರಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ಅವರ ಹಕ್ಕಿನ ಸ್ವರೂಪ ನನಗೆ ಗೊತ್ತಿಲ್ಲ.

19. ಮೇಲ್ಕಂಡ ಎಲ್ಲಾ ಸ್ವತ್ತುಗಳು ಬದುಕಿದ್ದಾಗ ನನ್ನ ತಾತ ನರಸಿಂಹೇಗೌಡರು ಅದರ ಮಾಲೀಕರಾಗಿದ್ದರು ಎಂದು ತೋರಿಸಲು ನನ್ನ ಬಳಿ ಪ್ರಿಲಿಮಿನರಿ ರೆಕಾರ್ಡ್ ಇದೆ. ಅದು ಬಿಟ್ಟರೆ ಬೇರೆ ದಾಖಲೆ ಇರುವುದಿಲ್ಲ. ಆ ಪ್ರಿಲಿಮಿನರಿ ರೆಕಾರ್ಡ್ ನ್ನು ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ತೊಂದರೆ ಇಲ್ಲ. ಮೇಲ್ಕಂಡ ಎಲ್ಲ ಸ್ವತ್ತುಗಳು ನರಸಿಂಹೇಗೌಡರೆ ಮಾಲೀಕರು ಎಂದು ಯಾವುದೆ ಮೂಲ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಹಾಗಾಗಿ ನಾನಾಗಲಿ ಇತರ ಪ್ರತಿವಾದಿಗಳಾಗಲಿ ಮೂಲ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

20. ಮೇಲ್ಕಂಡ ಸ್ವತ್ತುಗಳು ತರಿ ಮತ್ತು ಖುಷ್ಕಿ ಸ್ವತ್ತುಗಳಾಗಿದ್ದವು. ಸಂಜೀವೇಗೌಡ ನ ಮಗ ನರಸಿಂಹಯ್ಯ, ಚಿಕ್ಕ ನರಸಿಂಹೇಗೌಡರ ಮಗ ಲಕ್ಷ್ಮೀಪತಯ್ಯ, ನರಸಿಂಹೇಗೌಡ ಮತ್ತು ನಾಗರಾಜು, ಲಕ್ಷ್ಮಣೇಗೌಡನ ಮಕ್ಕಳು ಕೃಷ್ಣಮೂರ್ತಿ ಮತ್ತು ನರಸೇಗೌಡ ಎಲ್ಲರು ಸೇರಿಕೊಂಡು ಬೇರೆಯವರಿಗೆ ಮಾರಾಟ ಮಾಡಿದ್ದಾರೆ ಹಾಗೂ ಕೆಲವು ಸ್ವತ್ತುಗಳನ್ನು ಅವರವರ ಹೆಸರಿಗೆ ಸೃಷ್ಟಿ ಮಾಡಿಕೊಂಡಿದ್ದಾರೆ. ಆ ರೀತಿ ಎಲ್ಲ 11 ಸ್ವತ್ತುಗಳಿಗೆ ಸೃಷ್ಟಿ ಮಾಡಿಕೊಂಡಿದ್ದಾರೆ. ಆ ರೀತಿ ಸೃಷ್ಟಿ ಮಾಡುವುದನ್ನು ನನ್ನ ತಾತ ಮೃತಪಟ್ಟ ನಂತರ 1979 ರ ಈಚೆಗೆ ಮಾಡಿದ್ದಾರೆ. ನನ್ನ ತಾತ ನರಸಿಂಹೇಗೌಡರು ತೀರಿಕೊಂಡಿದ್ದು 1945 ರಲ್ಲಿ. ಅವರು ತೀರಿಕೊಂಡ ನಂತರವು ಸಹ ಆ 11 ಸ್ವತ್ತುಗಳು ಆರ್ ಟಿ ಸಿ, ಮ್ಯುಟೇಷನ್, ಇಂಡೆಕ್ಸ ಆಫ್ ಲ್ಯಾಂಡ್ ಹಾಗೂ ರೆಕಾರ್ಡ್ ಆಫ್ ರೈಟ್ಸ್ ಗಳು ಅವರ ಹೆಸರಿನಲ್ಲೆ ಇವೆ. ಆ ದಾಖಲೆಗಳು ನನ್ನ ಬಳಿ ಇಲ್ಲದೆ ಇರುವುದರಿಂದ ಅವುಗಳನ್ನೆಲ್ಲಾ ಹಾಜರುಪಡಿಸಿರುವುದಿಲ್ಲ. ಆದರೆ ಒಂದು ಇಂಡೆಕ್ಸ ಅಫ್ ಲ್ಯಾಂಡ್ ನ್ನು ಹಾಜರುಪಡಿಸಿದ್ದೇನೆ. ಆ ಇಂಡೆಕ್ಸ ಅಫ್ ಲ್ಯಾಂಡ್ ನ್ನು ಕೂಡ ನನ್ನ ಬಳಿ ಇಲ್ಲದೆ ಇರುವುದರಿಂದ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಸಿವಿಲ್ ಶ್ರೇಣಿ ನ್ಯಾಯಾಧೀಶರು,**
**ಮಾಗಡಿ.**